# ಡಾ.ಕೆ. ಹೇಮಂತ್ ಕುಮಾರ್

## ಜಠರಗರುಳಿನ ಜಟಿಲತೆಗೆ ಪರಿಹಾರ ನೀಡುವ ತಜ್ಞ



**ಡಾ.ಕೆ. ಹೇಮಂತ್ ಕುಮಾರ್** ಅವರು ಅತ್ಯಂತ ಅನುಭವಿ ಜಠರಗರುಳಿನ ಶಸ್ತ್ರಚಿಕಿತ್ಸಕರಾಗಿದ್ದು, ಪ್ರಸ್ತುತ ಮಣಿಪಾಲ್ ಆಸ್ಪತ್ರೆಯಲ್ಲಿ ಗ್ಯಾಸ್ಟ್ರೋಎಂಟರಾಲಜಿಯ ಶಸ್ತ್ರಚಿಕಿತ್ಸಾ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಜಠರಗರುಳಿನ ಮತ್ತು ರಿಫ್ಲಕ್ಸ್ ಶಸ್ತ್ರಚಿಕಿತ್ಸೆಗಳಲ್ಲಿ 15 ವರ್ಷಗಳ ಅನುಭವವನ್ನು ಹೊಂದಿದ್ದಾರೆ.

ಇಂಡಿಯನ್ ಅಸೋಸಿಯೇಷನ್ ಆಫ್ ಗ್ಯಾಸ್ಟ್ರೋಇಂಟೆಸ್ಟಿನಲ್ ಸರ್ಜನ್ಸ್‌ನ ಫೆಲೋ ಆಗಿರುವ ಡಾ.ಹೇಮಂತ್ ಅವರು ತಮ್ಮ ವೃತ್ತಿಜೀವನದುದ್ದಕ್ಕೂ ಹಲವಾರು ಪ್ರಶಸ್ತಿ ಮತ್ತು ಪ್ರಶಂಸೆಗಳನ್ನು ಪಡೆದಿದ್ದಾರೆ.

ಚಂಡೀಗಢದ ಪಿಜಿಐಎಂಇಆರ್‌ನಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಅಗ್ರಸ್ಥಾನ ಪಡೆದ ಅವರು ಅಲ್ಲಿ 13 ವರ್ಷಗಳ ಕಾಲ ಹಿರಿಯ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಂತರ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಸ್ಥಳಾಂತರಗೊಂಡರು.

ಹೇಮಂತ್ ಅವರ ಹಲವಾರು ಸಂಶೋಧನಾ ಲೇಖನಗಳು ದೇಶೀಯ ಮತ್ತು ವಿದೇಶಿ ನಿಯತಕಾಲಿಕೆಗಳು ಮತ್ತು ಜರ್ನಲ್‌ಗಳಲ್ಲಿ ಪ್ರಕಟಗೊಂಡಿವೆ. ಅವರು ವಿವಿಧ ಸಮ್ಮೇಳನ ಮತ್ತು ವಿಚಾರ ಸಂಕಿರಣಗಳಲ್ಲಿ ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ.

ಡಾ. ಹೇಮಂತ್ ಅವರು ವೀಡಿಯೊ ನೆರವಿನಿಂದ ಥೊರಾಕೊಸ್ಕೋಪಿಕ್ ಶಸ್ತ್ರಚಿಕಿತ್ಸೆ ಮಾಡುವುದರಲ್ಲಿಯೂ ಪರಿಣಿತರಾಗಿದ್ದಾರೆ. ಇಂಡಿಯನ್ ಅಸೋಸಿಯೇಷನ್ ಆಫ್ ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ ಮತ್ತು ಇಂಡಿಯನ್ ಅಸೋಸಿಯೇಷನ್ ಆಫ್ ಗ್ಯಾಸ್ಟ್ರೋಇಂಟೆಸ್ಟಿನಲ್ ಎಂಡೋ ಸರ್ಜನ್ಸ್ ಸೇರಿದಂತೆ ಅನೇಕ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಡಾ. ಹೇಮಂತ್ ಅವರು ಆಜೀವ ಸದಸ್ಯರಾಗಿದ್ದಾರೆ

ವೈದ್ಯಕೀಯ ಕ್ಷೇತ್ರದಲ್ಲಿನ ಆಧುನಿಕ ತಾಂತ್ರಿಕ ಪ್ರಗತಿಯು ಆರೋಗ್ಯ ರಕ್ಷಣೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದಿದೆ ಮತ್ತು ಜನರು ಯಾವುದೇ ಹಿಂಜರಿಕೆಯಿಲ್ಲದೆ ಈ ಚಿಕಿತ್ಸಾ ಉಪಕ್ರಮಗಳ ಲಾಭ ಪಡೆಯಲು ಮುಂದೆ ಬರಬೇಕು ಎಂದು ಅವರು ಹೇಳುತ್ತಾರೆ.

ಸಾಮಾಜಿಕ ಆರ್ಥಿಕ ಸವಾಲುಗಳನ್ನು ಮೆಟ್ಟಿ ನಿಂತು ಜನರು ಉತ್ತಮ ಆರೋಗ್ಯ ರಕ್ಷಣೆಯನ್ನು ಪಡೆಯಲು ಸಹಾಯ ಮಾಡುವ ಸಲುವಾಗಿ ಡಾ. ಹೇಮಂತ್ ಅವರು ಎನ್‌ಜಿಒ ಒಂದನ್ನು ಸ್ಥಾಪಿಸಲು ಯೋಜಿಸಿದ್ದಾರೆ.

### ನಿಮ್ಮ ಹೊಟ್ಟೆಯನ್ನು ಸುರಕ್ಷಿತವಾಗಿರಿಸಿಕೊಳ್ಳಿ

ಅನೇಕ ಜನರು ಹೊಟ್ಟೆಗೆ ಸಂಬಂಧಿಸಿದ ಕಿರಿಕಿರಿ ಅಥವಾ ಅಸ್ವಸ್ಥತೆಯನ್ನು ಕೇವಲ ಆಮ್ಲೀಯ ಅಸಮತೋಲನವೆಂದು ನಿರ್ಲಕ್ಷಿಸುತ್ತಾರೆ ಮತ್ತು ಅದರ ನಿವಾರಣೆಗೆ ಮನೆ ಮದ್ದು ಅಥವಾ ಅಂಗಡಿಯಲ್ಲಿ ಸಿಗುವ ಗುಳಿಗೆಗಳನ್ನು ತೆಗೆದುಕೊಳ್ಳುತ್ತಾರೆ. ಇದು ತೀರಾ ತಪ್ಪು ಮಾತ್ರವಲ್ಲದೇ ಆರೋಗ್ಯಕ್ಕೆ ಹಾನಿಕಾರಕ ಎಂದು ಸಾಬೀತಾಗಿದೆ.

ಹೊಟ್ಟೆಯನ್ನು ಸುರಕ್ಷಿತ ಮತ್ತು ಆರೋಗ್ಯಕರವಾಗಿಡಲು ಉತ್ತಮ ಆಹಾರ ಪದ್ಧತಿ, ಮದ್ಯಪಾನ ಮತ್ತು ಧೂಮಪಾನದಿಂದ ದೂರವಿರುವುದು ಮತ್ತು ದೈನಂದಿನ ವ್ಯಾಯಾಮ ಸೇರಿದಂತೆ ದೈಹಿಕ ಚಟುವಟಿಕೆಗಳು ಅತ್ಯಗತ್ಯ.

**ಉದರವು ಅನೇಕ ರಹಸ್ಯಗಳನ್ನು ಮರೆಮಾಚುತ್ತದೆ ಮತ್ತು ಸಂಪೂರ್ಣವಾಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸದಿದ್ದರೆ ಅದು ರೋಗದ ಸ್ವರೂಪವನ್ನು ಬಹಿರಂಗಪಡಿಸುವುದಿಲ್ಲ, ಆದ್ದರಿಂದ ಹೊಟ್ಟೆ ನೋವು ಅಥವಾ ಅಸ್ವಸ್ಥತೆ ಇರುವ ಯಾರಾದರೂ ತಕ್ಷಣ ವೈದ್ಯರ ಅಭಿಪ್ರಾಯವನ್ನು ಪಡೆಯಬೇಕು.**

**ಡಾ.ಕೆ. ಹೇಮಂತ್ ಕುಮಾರ್**
ಕನ್ಸಲ್ಟೆಂಟ್ – ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ,
ಜಿಐ ಆಂಕಾಲಜಿ ಮತ್ತು ಎಚ್‌ಪಿಬಿ,
ರೊಬೊಟಿಕ್ ಸರ್ಜರಿ
ಮಣಿಪಾಲ್ ಆಸ್ಪತ್ರೆ

### ಕುಟುಂಬ ಮತ್ತು ಶೈಕ್ಷಣಿಕ ಪ್ರಯಾಣ

ಡಾ.ಹೇಮಂತ್ ಅವರ ತಂದೆ ಕೆ.ಟಿ.ಜಗನ್ನಾಥ್ ಮತ್ತು ತಾಯಿ ರೇಣುಕಾ ಇಬ್ಬರೂ ಶಿಕ್ಷಕರು. ಅವರಿಗೆ ಇಬ್ಬರು ಸಹೋದರರಿದ್ದು, ಅವರಲ್ಲಿ ಒಬ್ಬರು ಕರ್ನಾಟಕ ಬ್ಯಾಂಕಿನಲ್ಲಿ ಮ್ಯಾನೇಜರ್ ಮತ್ತು ಇನ್ನೊಬ್ಬರು ಚೆನ್ನೈ ಕಾರ್ಪೊರೇಷನ್ನಿನ ಆಯುಕ್ತರಾಗಿದ್ದಾರೆ. ಮೂಲತಃ ದಾವಣಗೆರೆಯವರಾದ ಇವರು ಬಳ್ಳಾರಿಯಲ್ಲಿ ತಮ್ಮ ಶಾಲಾ ಶಿಕ್ಷಣ ಮುಗಿಸಿದರು. ಅವರ ಶೈಕ್ಷಣಿಕ ಪಯಣವು ಅನೇಕ ಪದವಿ ಮತ್ತು ಪ್ರಶಂಸೆಗಳಿಂದ ಸಮೃದ್ಧವಾಗಿದೆ. 2008ರಲ್ಲಿ ಪ್ರತಿಷ್ಠಿತ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಿಂದ ಎಂಬಿಬಿಎಸ್ ಪದವಿ ಪಡೆದ ತರುವಾಯ ಅವರು ಚಂಡೀಗಢದಲ್ಲಿರುವ ಪಿಜಿಐಎಂಇಆರ್‌ನಲ್ಲಿ ಜನರಲ್ ಸರ್ಜರಿ ಮತ್ತು ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿಯಲ್ಲಿ ಎಂಎಸ್ ಮತ್ತು ನಂತರ ಎಂಸಿಎಚ್ ಅನ್ನು ಪೂರ್ಣಗೊಳಿಸಿದರು. 2008 ರಲ್ಲಿ ಶೈಕ್ಷಣಿಕ ಶ್ರೇಷ್ಠತೆಗಾಗಿ ಅವರಿಗೆ ಫರ್ಸ್ಟ್ ಆರ್ಡರ್ ಪದಕವನ್ನು ನೀಡಲಾಯಿತು. ಡಾ. ಹೇಮಂತ್ ಅವರು ದಂತ ಕಾಲೇಜಿನಲ್ಲಿ ಅಂಗರಚನಾಶಾಸ್ತ್ರದಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಶಾಲು ಅವರನ್ನು ವರಿಸಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.

### ಪ್ರಶಸ್ತಿ ಮತ್ತು ಸಾಧನೆ

- ಚಂಡೀಗಢದ ಪಿಜಿಐಎಂಇಆರ್‌ನಿಂದ 2008 ರಲ್ಲಿ ಎಂ.ಎಸ್ ನಲ್ಲಿ (ಜನರಲ್ ಸರ್ಜರಿ) ಶೈಕ್ಷಣಿಕ ಶ್ರೇಷ್ಠತೆಗಾಗಿ ಫರ್ಸ್ಟ್ ಆರ್ಡರ್ ಮೆಡಲ್.
- ಟ್ರಾವೆಲ್ ಗ್ರಾಂಟ್ – ಪ್ಯಾರಿಸ್‌ನಲ್ಲಿ 2012 ರಲ್ಲಿ ನಡೆದ ಅಂತರರಾಷ್ಟ್ರೀಯ ಹೆಪಾಟೊ-ಪ್ಯಾಂಕ್ರಿಯಾಟೊ-ಬಿಲಿಯರಿ ಅಸೋಸಿಯೇಷನ್‌ನ 10 ನೇ ವಿಶ್ವ ಕಾಂಗ್ರೆಸ್‌ನಲ್ಲಿ ಸಮ್ಮಾನ
- ಭಾರತದ ಐಎಎಸ್‌ಜಿಯಿಂದ 2016ರಲ್ಲಿ ಬರ್ಸರಿ ಪ್ರಶಸ್ತಿ.
- ಸರ್ಜಿಕಲ್ ಅನಾಟಮಿ ಆಫ್ ಲಿವರ್ ಕೆಲಸಕ್ಕಾಗಿ 2016 ರಲ್ಲಿ ಐಎಎಸ್ ಜಿ ಕಾಂಗ್ರೆಸ್‌ನಲ್ಲಿ ಅತ್ಯುತ್ತಮ ಪೋಸ್ಟರ್ ಪ್ರಶಸ್ತಿ.
- ಅನ್ನನಾಳದ ಕ್ಷಯರೋಗದ ಬಗ್ಗೆ ಕೆಲಸ ಮಾಡಿದ್ದಕ್ಕಾಗಿ 2019 ರಲ್ಲಿ ನವದೆಹಲಿಯ ಏಮ್ಸ್‌ನಲ್ಲಿ ನಡೆದ 29ನೇ ಐಎಎಸ್‌ಜಿ ಕಾಂಗ್ರೆಸ್‌ನಲ್ಲಿ ಅತ್ಯುತ್ತಮ ಪೋಸ್ಟರ್ ಪ್ರಶಸ್ತಿ.